# ‘ಕರ್ವಾಲೊ’–ಕಾದಂಬರಿ ಒಂದು ತಾತ್ವಿಕತೆಯ ಓದು

**ಪ್ರಕಾಶ ಬಿ.**

ಸಂಶೋಧನಾ ವಿದ್ಯಾರ್ಥಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**Received: 07-03-2024 ; Accepted: 16-03-2024 ; Published: 07-05-2024**

**DOI: https://doi.org/10.5281/zenodo.11127182**

## ABSTRACT:

‘ಕರ್ವಾಲೊ’ ಕಾದಂಬರಿ ಬದುಕಿನ ಮೂಲ ದ್ರವ್ಯಕ್ಕೆ–ಅವುಗಳ ಪ್ರತ್ಯೇಕ ಸ್ಥಿತಿಯಲ್ಲಿ ಇದ್ದಿರಬಹುದಾದ ಅಥವಾ ಇದ್ದಂತೆ ಕಾಣಿಸುವ ಮೂರ್ತ ಅರ್ಥ ದೊಂದಿಗೆ ಕರಗಿಕೊಂಡು ಅಂತಿಮವಾಗಿ ಅಮೂರ್ತ ಅಥವಾ ನಿಗೂಢ ಅರ್ಥ ಪರಂಪರೆಗಳನ್ನು ಅನುರಣಿಸುವಂತೆ ಮಾಡುವ ಹೊಂಚು ತೇಜಸ್ವಿಯವರ ಈ ಕೃತಿಯಲ್ಲಿ ಇದೆ. ಕರಾರುವಾಕ್ಕಾದ ಶಾಸ್ತ್ರಜ್ಞಾನದ ಆನ್ವೇಷಣೆಗಾಗಿ ಅಲ್ಲ, ಸತ್ಯಾನುಭವದ ಅರಸುವಿಕೆಗಾಗಿ ಎಂಬುದು ಗಮನಾರ್ಹ. ನೀರಸ ವಸ್ತುವಿನಂತೆ ಜನ ಸಾಮಾನ್ಯರಿಂದ ದೂರ ಉಳಿದು ಬಿಡುವ ವೈಜ್ಞಾನಿಕ ಸತ್ಯಗಳು ಈ ಕಾದಂಬ ರಿಯಲ್ಲಿ ವಿಜ್ಞಾನದ ಅನೇಕ ವರ್ಷಗಳ ಸಾಧನೆಯನ್ನು ತಟಕ್ಕನೆ ಏರುಪೇರು ಮಾಡಬಲ್ಲ ಶಕ್ತಿಯನ್ನು, ರಹಸ್ಯಗಳನ್ನು ಸಂಗತಿಗಳನ್ನು ಪಡೆದುಕೊಂಡಿರುವ ಜೀವಚರ. ಇದು ನಮ್ಮ ಪ್ರಜ್ಞೆ; ನಮ್ಮ ಕುತೂಹಲ; ನಮ್ಮ ದಿಗ್ಭ್ರಮೆಯೂ ಹೌದು; ನಮ್ಮ ತಿಳುವಳಿಕೆಯ ದಿಕ್‌ಸೂಚಿಯೂ ಹೌದು. ನಮ್ಮನ್ನು ಒಂದೇ ಜಿಗಿತಕ್ಕೆ ಕೋಟ್ಯಂತರ ವರುಷಗಳ ಹಿಂದಕ್ಕೆ ಒಯ್ಯುವ ಸಾಧನವೂ ಹೌದು. ಜೀವ ವಿಕಾಸದ ಹಾದಿಯಲ್ಲಿನ ಅನೇಕ ಸಂಗತಿಗಳನ್ನು ಬಿಚ್ಚುವ ಕಾಲಕೋಶವೂ ಹೌದು. ಅದು ನಮ್ಮ ವಿಜ್ಞಾನ; ನಮ್ಮ ಆಧ್ಯಾತ್ಮ ಕೂಡಾ. ಕುತೂಹಲವಾಗಿ ಕಾಣಿಸಿಕೊಂಡು ಬಿಡಿಸಲಾಗದ ನಿಗೂಢವಾಗಿ ಸಂಕೇತವಾಗುತ್ತ ಪ್ರತಿಮೆಯಾಗುತ್ತ ನಮ್ಮ ಪ್ರಜ್ಞೆಯೇ ಆಗುತ್ತ ನಮ್ಮ ವ್ಯಕ್ತಿತ್ವವನ್ನೇ ಆವರಿಸಿಬಿಡುವ, ನಿಯಂತ್ರಿಸಿ ಬಿಡುವ ಈ ಹಾರುವ ಓತಿ ಹೌದು,

## KEYWORDS:

ಸ್ಥಾಯಿಭಿತ್ತಿ, ಪ್ರಜ್ಞೆ, ಜೀವವಿಕಾಸ, ವೈಜ್ಞಾನಿಕ ಸತ್ಯ, ವಿಜ್ಞಾನ–ಪ್ರಕೃತಿ, ಹಾರುವ ಓತಿ, ಕರ್ವಾಲೋ, ಮಂದಣ್ಣ.

‘ಕರ್ವಾಲೊ’ದಲ್ಲಿ ‘ಹಾರುವ ಓತಿ’ ಸ್ಥಾಯಿಭಿತ್ತಿಯಾಗಿದೆ.” ಕರ್ವಾಲೋ’ ಪ್ರಕಟಗೊಂಡ ಹೊಸತರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗದ ಸಂಶೋಧಕಿಯೊಬ್ಬರು ಆರರ ಮುಂದೆ ಒಂಬತ್ತು ಸೊನ್ನೆ ಹಾಕಿದಾಗ

ಆಗಬಹುದಾದಷ್ಟು ವರ್ಷಗಳಷ್ಟು ಹಿಂದಿನದ್ದಿರಬಹುದಾದ ಹಾರುವ ಓತಿಯ ಬಗ್ಗೆ ತೇಜಸ್ವಿಯವರಿಗೆ ಕಾಗದ ಬರೆದು ಪ್ರಶ್ನಿಸಿದ್ದರು. "ಈ ರೀತಿ ಸ್ಥಾಯಿಭಿತ್ತಿಯೊಂದು ಈ ಎಲ್ಲ ಕೃತಿಗಳಲ್ಲಿಯೂ ಬಂದಿರುವುದು ಕೇವಲ ಆಕಸ್ಮಿಕವೆಂದು ನನಗೆ ಅನಿಸುವುದಿಲ್ಲ. ಎಲ್ಲ ಕೃತಿಗಳಲ್ಲಿಯೂ ಆ ಸ್ಥಾಯಿಭಿತ್ತಿಯ ಸಮ್ಮುಖದಲ್ಲಿ ಚಲನಶೀಲವಾದ ಬದುಕಿನ ಕ್ರಿಯೆಗಳು ನಡೆಯುತ್ತಿವೆ. ಆ ಸ್ಥಾಯಿಭಿತ್ತಿಯ ಹಿನ್ನೆಲೆಯಿಂದಾಗಿ ಚಲನಶೀಲವಾದ ಬದುಕಿನ ಕ್ರಿಯೆಗಳು ಹೊಸ ಅರ್ಥವಂತಿಕೆಯಲ್ಲಿ ಗೋಚರಿಸತೊಡಗುತ್ತದೆ. ಹಾಗೆಯೇ ಚಲನಶೀಲವಾದ ಬದುಕಿನ ಕ್ರಿಯೆಗಳ ಮುನ್ನೆಲೆಯಿಂದಾಗಿ ಆ ಸ್ಥಾಯಿಭಿತ್ತಿಗೆ ಹೊಸ ಅರ್ಥವಂತಿಕೆಯ ಆಯಾಮ ಪ್ರಾಪ್ತವಾಗುತ್ತದೆ ಅಥವಾ ದತ್ತವಾಗುತ್ತದೆ. ಈ ಎರಡೂ ಹೊಸ ಅರ್ಥವಂತಿಕೆಗಳು ಚಿರವಾಸ್ತವದ ಸಂಕೇತವಾದ ಆ ಸ್ಥಾಯಿಭಿತ್ತಿಯ ಹಾಗೂ ಚರವಾಸ್ತವದ ಸಂಕೇತವಾದ ಆ ಚಲನಶೀಲ ಬದುಕಿನ ಮೂಲದ್ರವ್ಯಕ್ಕೆ–ಅವುಗಳ ಪ್ರತ್ಯೇಕ ಸ್ಥಿತಿಯಲ್ಲಿ ಇದ್ದಿರಬಹುದಾದ ಅಥವಾ ಇದ್ದಂತೆ ಕಾಣಿಸುವ ಮೂರ್ತ ಅರ್ಥದೊಂದಿಗೆ ಕರಗಿಕೊಂಡು ಅಂತಿಮವಾಗಿ ಅಮೂರ್ತ ಅಥವಾ ನಿಗೂಢ ಅರ್ಥಪರಂಪರೆಗಳನ್ನು ಅನುರಣಿಸುವಂತೆ ಮಾಡುವ ಹೊಂಚು ತೇಜಸ್ವಿಯವರ ಈ ಕೃತಿಯಲ್ಲಿ ಇದೆ.

ಪರಿಸರ ಮತ್ತು ವ್ಯಕ್ತಿತ್ವಗಳ ಸಂಘರ್ಷದ ಜಗತ್ತಿನಲ್ಲಿ ಸಂವೇದನೆಯನ್ನು ಸ್ವತಂತ್ರವಾಗಿ ಉಳಿಸಿಕೊಳ್ಳಬೇಕೆಂಬುದು ತೇಜಸ್ವಿಯವರ ನಿಲುವು. ಈ ಸಿದ್ಧಾಂತಗಳ ಹಿನ್ನೆಲೆಯಲ್ಲಿ 'ಕರ್ವಾಲೊ' ಕೃತಿ ಅರ್ಥಪೂರ್ಣ ವಾಗುತ್ತವೆ. ಸತ್ಯಕ್ಕೆ ಅನಂತಮುಖಗಳು ಎಂಬುದು ಅಂತಿಮವಾಗಿ ಗೋಚರವಾಗುವ ಸತ್ಯ! ನಿಗೂಢ, ರಹಸ್ಯ ಶಬ್ದಗಳು ಇಲ್ಲಿ ಬಳಕೆಯಾಗಿದೆ. ಕರ್ವಾಲೊ ಜೀವವಿಕಾಸ ಪಥದಲ್ಲಿ ಎಲ್ಲವೂ ಬದಲಾಗುತ್ತ ರೂಪಾಂತರ ಹೊಂದುತ್ತಾ ಬಂದಿರುವಾಗ ಹಾರುವ ಓತಿ ಮಾತ್ರ ಬದಲಾಗದೆ ಉಳಿದಿದೆ. ಮಿಲಿಯಾಂತರ ವರ್ಷಗಳ ಹಿಂದಿನ ಅದರ ಸ್ವರೂಪ ರಹಸ್ಯದ ಬಗೆಗೆ ಜೀವ ವಿಜ್ಞಾನಿ ಕರ್ವಾಲೊ ತಳೆಯುವ ಕುತೂಹಲವೇ ಕಾದಂಬರಿಯ ಹಂದರವಾಗಿದೆ. ತೇಜಸ್ವಿಯವರು ಕಾದಂಬರಿಗಳಲ್ಲಿ ವೈಜ್ಞಾನಿಕ ವಿಷಯಗಳನ್ನು ಬಳಸಿಕೊಂಡಿದ್ದರೂ ಕರಾರುವಾಕ್ಕಾದ ಶಾಸ್ತ್ರಜ್ಞಾನದ ಆನ್ವೇಷಣೆಗಾಗಿ ಅಲ್ಲ, ಸತ್ಯಾನುಭವದ ಅರಸುವಿಕೆಗಾಗಿ ಎಂಬುದು ಗಮನಾರ್ಹ. ಕಾದಂಬರಿಯಲ್ಲಿ ಬರುವ ಜೇನ್ನೊಣದ ವರ್ಣನೆಯಲ್ಲಿ ವಿಕಾಸಪಥದ ಜೀವಿಗಳ ಮಜಲನ್ನು ಸೂಚಿಸುವುದೇ ಆಗುತ್ತದೆ. ಅವುಗಳ ವರ್ತನೆಗೆ ಸ್ವಭಾವ ಜನ್ಮ ಆಂತರಿಕವಾದ ಗುಣ ಹೇಗೆ ಕಾರಣವೋ ಹಾಗೇ ಕೆಲವು ಪಾತ್ರಗಳಲ್ಲೂ ಆ ಶಕ್ತಿಯನ್ನು ಕಾಣಬಹುದಾಗಿದೆ. ಕರ್ವಾಲೊ ವಿಜ್ಞಾನಿ, ಪ್ರತಿಭಾವಂತನಾದರೆ, ಆ ಯಾವ ಅಕಾಡೆಮಿಕ್ ಶಿಕ್ಷಣವೂ ಇಲ್ಲದ ಹಳ್ಳಿಯ ಮಂದಣ್ಣ ಅದ್ಭುತ ಪ್ರಕೃತಿ ಶಾಸ್ತ್ರಜ್ಞ,

ನಿಸರ್ಗವೇ ಅವನ ಗುರು, ಎಂಗ್ಟ ಹಾವಿನ ಸೂಕ್ಷ್ಮಾತಿಸೂಕ್ಷ್ಮ ಅರಿವನ್ನು ಪಡೆದವನು. ಅವನು ಹಾವಿನಚರ್ಮ ಸುಲಿಯುವ ಕೈಚಳಕ ವಿಸ್ಮಯಕಾರಿಯಾದದ್ದು, ಬಿರಿಯಾನಿ ಕರಿಯಪ್ಪ, ಪ್ಯಾರ, ಕಿವಿ'– ಎಲ್ಲವೂ ಕಡೆದ ಶಿಲ್ಪಗಳಂತೆ ವಿಶಿಷ್ಟವಾದ ಪಾತ್ರಗಳಾಗಿವೆ. ಮನುಷ್ಯನ ಎಲ್ಲ ಅನ್ವೇಷಣೆಗಳಿಗೆ ಒಂದು ಮಿತಿ ಇದೆ. ನಿಸರ್ಗದ ಭಾಗವಾದ. ಆದರ ವಿಕಾಸದ ಫಲವಾದ ಮಾನವ ಅದರ ರಹಸ್ಯವನ್ನೇ ಭೇದಿಸಲು ಹೋದಾಗಲೂ ಮೀರಿ ಸಾಗಲು ಸಾಧ್ಯವಿಲ್ಲ. ಕಾದಂಬರಿಯ ಅಂತಿಮ ದೃಶ್ಯ ಪರಿಣಾಮಕಾರಿಯಾಗಿ ಮೂಡಿಬಂದಿದೆ. ಹಾರುವ ಓತಿಯನ್ನು ಹಿಡಿಯುವ ಅಂತಿಮ ಘಟ್ಟದಲ್ಲಿ, ಅದು ಬೆಟ್ಟದ ನೆತ್ತಿಗೆ ಹಾರುತ್ತದೆ ಅಲ್ಲಿಂದ ಕೋಡುಗಲ್ಲಿನಾಚೆಗೆ, ಪ್ರಪಾತದ ಕಡೆಗೆ ಚಿಮ್ಮಿ, ಪಕ್ಕಗಳೇ ರೆಕ್ಕೆಗಳಾಗಿ ತೇಲಿ ತೇಲಿ ನೀಲಿಯ ಅಸ್ಪಷ್ಟ ಶೂನ್ಯದ ಕಡೆಗೆ ಕಣ್ಮರೆಯಾಗಿ ಹೋಗುತ್ತದೆ. ಆಗ ಕರ್ವಾಲೊ "ಹೋಗಲಿ ಬಿಡಿ, ಬ್ಯಾಡ್‌ಲಕ್. ಆದರೆ ಏನೂ ಬೇಸರವಿಲ್ಲ" ಎನ್ನುತ್ತಾರೆ. ಈ ವೈಫಲ್ಯ ನಿರಾಶಾದಾಯಕವಲ್ಲ, ತಿಳಿದಷ್ಟೆ ಅರಿವು, ಅನ್ವೇಷಣೆಯ ಅನುಭವವೇ ಸಾರ್ಥಕ್ಯ ಎಂಬ ದೃಷ್ಟಿಯೂ ಇಲ್ಲಿ ವ್ಯಕ್ತ. ವಿಜ್ಞಾನಿ ಕರ್ವಾಲೋ ಒಂದು ಕೊನೆಯಾದರೆ ಮಂದಣ್ಣ ಮತ್ತೊಂದು ಕೊನೆ. ಕರ್ವಾಲೋ ಅವರ ಅಸ್ತಿತ್ವದ ಬೇರುಗಳು ವಿಜ್ಞಾನ ಕ್ಷೇತ್ರದಲ್ಲಿ ನೆಲೆ ಪಡೆದುಕೊಂಡರೆ, ಮಂದಣ್ಣನ ಅಸ್ತಿತ್ವ ಇರುವುದು ಪ್ರಕೃತಿಯಲ್ಲಿ ವಿಜ್ಞಾನ–ಪ್ರಕೃತಿಗಳ ನಡುವಣ ಕೊಂಡಿಯಾಗಿ, ಜೀವತಂತುವಾಗಿ, ಜೀವ ವಿಕಾಸ ಪಥದ ಅವಶೇಷವಾಗಿ, ಕರ್ವಾಲೋ–ಮಂದಣ್ಣರ ನಡುವಣ ಸಂಹವನ ಕ್ರಿಯೆಯಾಗಿ, ಆಸಕ್ತಿಯ ಕೇಂದ್ರವಾಗಿ ಹಾರುವ ಓತಿ ಬರುತ್ತದೆ. ಹೀಗೆ ಒಂದರೊಳಗೊಂದು ಬೆರೆಯುತ್ತ, ಇತಿಹಾಸ–ವರ್ತಮಾನ–ಭವಿಷ್ಯತ್ತುಗಳನ್ನು ಬೆಸೆಯುತ್ತ, ವಿಜ್ಞಾನ ಅಧ್ಯಾತ್ಮವಾಗುತ್ತ, ವಾಸ್ತವ ವಿಸ್ಮಯವಾಗುತ್ತ ಓದುಗನನ್ನು ಆವರಿಸಿಬಿಡುವ ಈ ಕಾದಂಬರಿ ಪ್ರಬುದ್ಧ ಚಿಂತಕನೊಬ್ಬ ತೀವ್ರ ಕಾಳಜಿಯಿಂದ ನಡೆಸಿದ ತತ್ವ ಜಿಜ್ಞಾಸೆಯಾಗಿದೆ: ಜೀವಪರ ಧೋರಣೆಯ ಕಲಾಕಾರನೊಬ್ಬ ಹಿಡಿದಿಟ್ಟ ದಟ್ಟ ಜೀವನದ ವಿವರಣೆಯಾಗಿದೆ; ವಿಸ್ಮಯಗಳ ಬೆನ್ನು ಹತ್ತಿದ ವಿಜ್ಞಾನಾಸಕ್ತನೊಬ್ಬ ಮಂಡಿಸಿದ ದಾಖಲೆಗಳ ಪುಸ್ತಕದಂತಿದೆ. ಇಂಥ ಕೃತಿಯೊಂದು ಓದುಗನ ಸುಲಭ ಅಧ್ಯಯನಕ್ಕೆ ದಕ್ಕದ ಕೃತಿಯಾಗಬೇಕಿತ್ತು. ಆದರೆ ಈ ಎಣಿಕೆಯನ್ನು ತಲೆ ಕೆಳಗು ಮಾಡುವಂತೆ 'ಕರ್ವಾಲೋ' ತೀರ ಸರಳ ಕೃತಿಯಂತೆ ಓದಿಸಿಕೊಳ್ಳುತ್ತದೆ. ಕಾದಂಬರಿಯನ್ನು ಮೇಲುಸ್ತರದಲ್ಲಷ್ಟೆ ಗ್ರಹಿಸಬಲ್ಲ ಸಾಮಾನ್ಯ ಓದುಗನಿಗೂ ರುಚಿಹತ್ತಿಸುವ ಗುಣವನ್ನು ಪಡೆದುಕೊಂಡಿದೆ. ಒಂದಿಷ್ಟು ಗಡಸು ಶೈಲಿಯ ತೇಜಸ್ವಿ ಇಲ್ಲಿ ತಿಳಿಹಾಸ್ಯದ ಸರಳ ಸಹಜ ಗತಿಯಲ್ಲಿಯೇ ಇಡೀ ಕೃತಿಯನ್ನು ನಡೆಸುತ್ತಾರೆ. ಹಳ್ಳಿಗರ ಬದುಕಿನಲ್ಲಿ ಮಾಮೂಲಿನಂತೆ ಬರುವ ಎಷ್ಟೋ ಹಾಸ್ಯ ಪ್ರಸಂಗಗಳು

ಹಾಗೆಯೇ ಕಾದಂಬರಿಯಲ್ಲಿ ಪ್ರವೇಶ ಪಡೆಯುವುದರಿಂದ 'ಕರ್ವಾಲೋ' ಕೈಗೆತ್ತಿಕೊಂಡರೆ ನಗೆ ಕಟ್ಟೆಯೊಡೆದು ಧುಮ್ಮಿಕ್ಕುತ್ತದೆ. ಒಂದು ಫ್ಲಾಷ್ ಲೈಟು ಮಂದಣ್ಣನ ಮೇರೇಜಿನ ಗದ್ದಲವನ್ನೇ ನಿಯಂತ್ರಿಸುವ ಪ್ರಸಂಗವನ್ನೇ ನೋಡಿ. ಇಲ್ಲಿ ಹಾಸ್ಯ ಎಳೆದು ತಂದ ಸರಕಲ್ಲ. ಬದುಕಿನ ಸಹಜ ಗತಿಯಲ್ಲಿ ಅರಳಿದ ಪ್ರಸಂಗವಷ್ಟೆ, ಇಡೀ ಕೃತಿಯಲ್ಲಿ ಇಂಥ ಪ್ರಸಂಗಗಳಿಗೆ ಬರವಿಲ್ಲ. ನಿರೂಪಣಾ ಶೈಲಿಯಲ್ಲೂ ಈ ಹಾಸ್ಯ ಕಂಡು ಬರುತ್ತದೆ. ಇದೇ ಈ ಕಾದಂಬರಿಯ ಅಯಸ್ಕಾಂತ ಶಕ್ತಿ. ಕರ್ವಾಲೋ ಕೃತಿಯ ಮಹತ್ವ ಇರುವುದು ಅದು ಬದುಕನ್ನು ಗ್ರಹಿಸುವ ಕ್ರಮದಲ್ಲಿ; ಅದು ಕಟ್ಟಿಕೊಡುವ ಸಣ್ಣ ಸಣ್ಣ ವಿವರಗಳಲ್ಲಿ; ಅದು ಸೃಷ್ಟಿಸುವ ಅಥೆಂಟಿಕ್ ಪ್ರಪಂಚದಲ್ಲಿ. ಲೋಹಿಯಾ ಅವರ ತತ್ವ ಚಿಂತನೆಯ ಪ್ರಭಾವಕ್ಕೆ ಒಳಗಾದ ಬರಹಗಾರನೊಬ್ಬ ಗ್ರಾಮೀಣ ಭಾರತವನ್ನು ಕಂಡು, ಅನುಭವಿಸಿದ, ವಿವೇಚಿಸಿದ ಪುರಾವೆ ನಮಗಿಲ್ಲಿ ದೊರೆಯುತ್ತದೆ. ತೇಜಸ್ವಿಯವರ ಜೀವನಾಸಕ್ತಿಯಂತೆಯೇ ಅವರ ವಿಜ್ಞಾನಾಸಕ್ತಿ–ಕುತೂಹಲಗಳೂ ಅಧ್ಯಯನ ವಿಷಯಗಳಾಗಬಲ್ಲವು. ನೀರಸ ವಸ್ತುವಿನಂತೆ ಜನ ಸಾಮಾನ್ಯರಿಂದ ದೂರ ಉಳಿದು ಬಿಡುವ ವೈಜ್ಞಾನಿಕ ಸತ್ಯಗಳು ಈ ಕಾದಂಬರಿಯಲ್ಲಿ ಗರಿಬಿಚ್ಚಿ ಹಾರುತ್ತವೆ. ಕರ್ವಾಲೋ ಹಲವು ಅದ್ಭುತಗಳನ್ನು ಬಲ್ಲ ವರ್ಣರಂಜಿತ ವ್ಯಕ್ತಿಯಾಗುತ್ತಾರೆ. ಅರ್ಥವಂತಿಕೆಯನ್ನು, ಜೀವಂತಿಕೆಯನ್ನು ಕಳೆದುಕೊಂಡ ವಸ್ತುವಾಗಬೇಕಾಗಿದ್ದ ಅವರ ಪ್ರಯೋಗಾಲಯ ಅದ್ಭುತಗಳ ವಿಸ್ಮಯಗಳ ಆಗರವಾಗುತ್ತದೆ. ಫಿಕ್ಷನ್‌ನಲ್ಲಿ ಬರುವ ಎಲ್ಲ ವೈಜ್ಞಾನಿಕ ಸಂಗತಿಗಳೂ ವೈಜ್ಞಾನಿಕ ಫ್ಯಾಕ್ಟ್ ಆಗಬೇಕಾಗಿಲ್ಲ. ಆದರೆ ತೇಜಸ್ವಿಯವರ ವೈಜ್ಞಾನಿಕ ತಿಳುವಳಿಕೆ ಚಿಂತನೆಗಳ–ತರ್ಕಗಳ ಹಿನ್ನೆಲೆಯಲ್ಲಿ ಇವು ವಿಜ್ಞಾನಿಗಳ ಕುತೂಹಲವನ್ನು ಕೆರಳಿಸಿ ಇದು ಫ್ಯಾಕ್ಟ್ ಹೌದಾ? ಎಂದು ಪ್ರಶ್ನಿಸುವಂತೆ ಮಾಡಿಬಿಡುತ್ತವೆ. ಹಾರುವ ಓತಿಯನ್ನೇ ತೆಗೆದುಕೊಳ್ಳಿ. ಇದು ಇರಬಹುದು ಇಲ್ಲದಿರಬಹುದು. ಆದರೆ ತೇಜಸ್ವಿ ವರ್ಣಿಸುವ ಜೀವ ವಿಕಾಸ ಪಥ, ವೈಜ್ಞಾನಿಕ ಸತ್ಯ. ಈ ಹಾರುವ ಓತಿ ಉಳಿದ ಜೀವಿಗಳಂತೆ ವಿಕಾಸಗೊಳ್ಳದೆ ತನ್ನ ಮೂಲ ಸ್ವರೂಪದ ಪಳೆಯುಳಿಕೆಯಂತೆ ಉಳಿದುಕೊಂಡಿರುವುದಕ್ಕೆ ತೇಜಸ್ವಿ ನೀಡುವ ಕಾರಣಗಳು ವೈಜ್ಞಾನಿಕ ಆಧಾರ ಪಡೆದವಾಗಿವೆ. ಹೀಗಾಗಿ ಈ ಸಂಗತಿಗಳು ವಿಜ್ಞಾನಿಗಳ ಆಸಕ್ತಿಯನ್ನೂ ಕೆರಳಿಸಿಬಿಡುತ್ತವೆ. ಮೇಲುನೋಟಕ್ಕೆ ಕರ್ವಾಲೋ ಈ ಕಾದಂಬರಿಯ ನಾಯಕ ಪಾತ್ರದಂತೆ, ಕೇಂದ್ರ ವ್ಯಕ್ತಿಯಂತೆ ಕಂಡುಬರುತ್ತಾರೆ. ಆದರೆ ಕಾದಂಬರಿ ಬೆಳೆದಂತೆ ಮಂದಣ್ಣನ ಪಾತ್ರ ಮೈತುಂಬಿಕೊಳ್ಳುತ್ತಾ ಹೋಗಿ ಆತನ ವ್ಯಕ್ತಿತ್ವದ ವಿವಿಧ ಮುಖಗಳು ಬೆಳಗ ತೊಡಗಿ, ಮಂದಣ್ಣ ಕರ್ವಾಲೋ ಅವರ ಗುರುವಿನಂತೆ ಮುಖ್ಯ ಪಾತ್ರವಾಗಿ ಬಿಡುತ್ತಾನೆ. ಹೀಗೆ ವ್ಯಕ್ತಿಯಿಂದ ವ್ಯಕ್ತಿಗೆ ಸ್ಥಾನಪಲ್ಲಟ ಮಾಡುವ ನಮ್ಮ

ಆಸಕ್ತಿ ನಿಜಕ್ಕೂ ಕೇಂದ್ರೀಕೃತವಾಗುವುದು ಹಾರುವ ಓತಿಯ ಮೇಲೆಯೇ. ಒಂದು ಅರ್ಥದಲ್ಲಿ ಈ ಹಾರುವ ಓತಿ ಇಡೀ ಕಾದಂಬರಿಯನ್ನು ಆವರಿಸಿ ಕುಳಿತಿದೆ. ಈ ಓತಿಯ ಹುಡುಕಾಟವೇ ಈ ಕಾದಂಬರಿಯಲ್ಲಿ ಪ್ರಸ್ತಾಪಗೊಳ್ಳುವ ಕಥೆಯ ಹಂದರ. ಕರ್ವಾಲೋ ನೇತೃತ್ವದ ಇಡೀ ಗುಂಪು ಬೆನ್ನು ಹತ್ತಿರುವುದು ಈ ಓತಿಯನ್ನೇ. ಇದು ಎಲ್ಲರನ್ನೂ ನಿಯಂತ್ರಿಸುತ್ತದೆ. ಕಾದಂಬರಿಗೆ ನಾಟಕೀಯ ತಿರುವನ್ನು ತಂದುಕೊಡುತ್ತದೆ. ಕ್ಲೈಮ್ಯಾಕ್ಸನ್ನು ಕೂಡಾ ತಂದು ಕೊಡುವುದು ಇದೇ. ಇದು ಪ್ರಾಚೀನತೆಯ ಪಳೆಯುಳಿಕೆ. ಕಾಲ ಪ್ರವಾಹದಲ್ಲಿ ಉಳಿದು ಬಂದ ಜೀವತಂತುವಿನ ಸಂಕೇತವೂ ಹೌದು. ಹಲವು ರಹಸ್ಯಗಳ ಕೇಂದ್ರದಂತೆ, ವಿಜ್ಞಾನದ ಅನೇಕ ವರ್ಷಗಳ ಸಾಧನೆಯನ್ನು ತಟಕ್ಕನೆ ಏರುಪೇರು ಮಾಡಬಲ್ಲ ಶಕ್ತಿಯನ್ನು, ರಹಸ್ಯಗಳನ್ನು ಸಂಗತಿಗಳನ್ನು ಪಡೆದುಕೊಂಡಿರುವ ಜೀವಚರ. ಇದು ನಮ್ಮ ಪ್ರಜ್ಞೆ; ನಮ್ಮ ಕುತೂಹಲ; ನಮ್ಮ ದಿಗ್ಭ್ರಮೆಯೂ ಹೌದು; ನಮ್ಮ ತಿಳುವಳಿಕೆಯ ದಿಕ್‌ಸೂಚಿಯೂ ಹೌದು. ನಮ್ಮನ್ನು ಒಂದೇ ಜಿಗಿತಕ್ಕೆ ಕೋಟ್ಯಂತರ ವರುಷಗಳ ಹಿಂದಕ್ಕೆ ಒಯ್ಯುವ ಸಾಧನವೂ ಹೌದು. ಜೀವ ವಿಕಾಸದ ಹಾದಿಯಲ್ಲಿನ ಅನೇಕ ಸಂಗತಿಗಳನ್ನು ಬಿಚ್ಚುವ ಕಾಲಕೋಶವೂ ಹೌದು. ಅದು ನಮ್ಮ ವಿಜ್ಞಾನ: ನಮ್ಮ ಆಧ್ಯಾತ್ಮ ಕೂಡಾ. ಕುತೂಹಲವಾಗಿ ಕಾಣಿಸಿಕೊಂಡು ಬಿಡಿಸಲಾಗದ ನಿಗೂಢವಾಗಿ ಸಂಕೇತವಾಗುತ್ತ ಪ್ರತಿಮೆಯಾಗುತ್ತ ನಮ್ಮ ಪ್ರಜ್ಞೆಯೇ ಆಗುತ್ತ ನಮ್ಮ ವ್ಯಕ್ತಿತ್ವವನ್ನೇ ಆವರಿಸಿಬಿಡುವ, ನಿಯಂತ್ರಿಸಿ ಬಿಡುವ ಈ ಹಾರುವ ಓತಿ ಯಾವುದು, ಯಾವುದು ಅಲ್ಲ ಎಂಬ ಸಂದಿಗ್ಧಕ್ಕೆ ನಮ್ಮನ್ನು ತಳ್ಳಿ, ಸಹ್ಯಾದ್ರಿಯ ಕೊಟ್ಟಕೊನೆಯ ಅಂಚಿನಿಂದ ಪ್ರಪಾತದ ಕಡೆಗೆ ಕುಪ್ಪಳಿಸಿ ನೀಲಿಯ ಲೀನವಾಗಿಬಿಡುತ್ತದೆ. ಪರಿಸರದ ಸಮಾಜದಲ್ಲಿರುವ ಮನುಷ್ಯರ ಜತೆ, ನಿಸರ್ಗದ ಹಕ್ಕಿ ಪ್ರಾಣಿ ಗಿಡ ಮರ ಬಳ್ಳಿ ಹಳ್ಳ ಕೀಟ ಮಳೆ ಗಾಳಿ ಸಮಸ್ತ ಚರಾಚರಗಳನ್ನು ಒಟ್ಟಿಗೆ ನೋಡುತ್ತ ಬರೆಯುವುದು; ಇದನ್ನು 'ಜೀವಕೇಂದ್ರಿತ' ವಿಸ್ತರಣೆ ಪಡೆದ ಕಥನ ಎನ್ನಬಹುದು; 'ಕರ್ವಾಲೊ' ಕಾದಂಬರಿಯಿಂದ ಈ ಕಥನ ಆರಂಭವಾಗುತ್ತದೆ. ತೇಜಸ್ವಿಯವರಲ್ಲಿ ಕಥನಕ್ರಮದ ಈ ಪಲ್ಲಟಗಳು ಕೇವಲ ಶೈಲಿಯ ಮುರಿತಗಳಲ್ಲ. ಲೋಕವನ್ನು ನೋಡುವ ದೃಷ್ಟಿಕೋನದಲ್ಲಿ ಆದ ಬದಲಾವಣೆಯ ಸಂಕೇತಗಳು ಕೂಡ: 'ಕರ್ವಾಲೊ' ಕಾದಂಬರಿಯಲ್ಲಿ ಇರುವುದು ಕರ್ವಾಲೊ ಅವರ ಶೋಧದ ಕತೆಯೊ ಹಾರುವ ಓತಿಯ ಕಥನವೊ, ಮಂದಣ್ಣನ ಕಥೆಯೊ? 'ಹಾವುಮೀನು' ಎಂಬ ಕತೆಯ ಶೀರ್ಷಿಕೆ ಗಮನಿಸಿದರೂ ನಿಸರ್ಗ ಹಾಗೂ ಮಾನವ ಲೋಕದ ಬೆರೆಸುವಿಕೆ ಗೊತ್ತಾಗುತ್ತದೆ. ನಿಗೂಢತೆಯ ಶೋಧವು ತೇಜಸ್ವಿ ಬರೆಹದ ಜಲಚಿಹ್ನೆ. 'ಕರ್ವಾಲೋ' ಕಾದಂಬರಿ ಮುಕ್ತಾಯದಲ್ಲಿ ಬರುವ ಹೇಳಿಕೆಯಿದು: "ಸರಿ ತಪ್ಪು ಹೇಗೆ ಹೇಳ್ತಿರಿ.

ನಮಗೆ ಈ ಕ್ಷಣ, ಇಲ್ಲಿ ಹೀಗನಿಸಿದೆ. ಜೀವ ವಿಕಾಸಕ್ಕೆ ಎಲ್ಲಿದೆ ಕೊನೆ!" ಮನುಷ್ಯರಿಗೆ ಸೃಷ್ಟಿಯ ರಹಸ್ಯ ಪೂರ್ಣವಾಗಿ ದಕ್ಕುವುದಿಲ್ಲ ಎಂಬ ವಿನಯವು ಅದರ ಜತೆ ತೊಡಗುವಿಕೆಗೆ ಪ್ರೇರಕವಾಗುತ್ತದೆ ಯಾವುದಾದರೂ ಜೀವಿಯ ಸುಳಿವು ಕಂಡರೆ ಬೆನ್ನುಹತ್ತಿ ಹೋಗುವ ನಾಯಿಯು ತೇಜಸ್ವಿ ಬರೆಹದಲ್ಲಿ ಒಂದು ಪಾತ್ರವಾಗಿ ಬರುವುದು ಕೂಡ ಇಂತಹ ಹುಡುಕಾಟ ಮತ್ತು ಚೈತನ್ಯ ಪ್ರಕಟಣೆಯ ಭಾಗವಾಗಿದೆ. ಅಲೆದಾಟದ ವಿಷಯದಲ್ಲಿ ಈ ನಾಯಿಗಳಿಗೂ ಹೊಳೆಯ ಮೂಲ ಅಂತ್ಯಗಳನ್ನು ಹುಡುಕಿ ಹೋಗುವ ಕಥಾನಾಯಕರಿಗೂ ವ್ಯತ್ಯಾಸವಿಲ್ಲ. ಇದೊಂದು ಜೈವಿಕ ಅದ್ವೈತ ಸ್ಥಿತಿ. ನಾಯಿ ಕಳೆದುಹೋದಾಗ ನಿರೂಪಕ ಮಾಡುವ ಪ್ರಲಾಪ, ಕೆದಕಿಕೊಳ್ಳುವ ಸ್ಮೃತಿಗಳು ಗಮನಾರ್ಹ. ತೇಜಸ್ವಿಯವರ ಈ ಶೋಧಕಗುಣ ಹಾಗೂ ಆಧುನಿಕ ವಿಜ್ಞಾನದಲ್ಲಿ ಇರುವ ಶ್ರದ್ಧೆಯು, ಅವರನ್ನು ವಿಜ್ಞಾನದ ಪತ್ತೇದಾರಿ ಅಥವಾ ವಿಜ್ಞಾನದ ಲೇಖಕನನ್ನಾಗಿ ಮಾಡಬೇಕಿತ್ತು. ಆದರೆ ಹಾಗೆ ಆಗಲಿಲ್ಲ, ಯಾಕೆಂದರೆ ಅವರು ಈ ಶೋಧದ ಜತೆಗೆ ಮಾನವ ಬದುಕನ್ನು ಲಗತ್ತಿಸಿಬಿಡುತ್ತಾರೆ. ಬದುಕಿನ ಅರ್ಥಶೋಧದ ದಾರ್ಶನಿಕ ಗುಣವೆ ಅವರೊಬ್ಬ ಥ್ರಿಲ್ಲರ್‌ಗಳ ಲೇಖಕರಾಗದಂತೆ ತಡೆದಿದೆ. ಮಾನವರಲ್ಲಿ ಅಡಗಿರುವ ಅಪರಿಮಿತ ಚೈತನ್ಯವು ರೂಢಿಗೆ ಬಿದ್ದುಹೋಗಿರುವ ಸಾಂಪ್ರದಾಯಕ ಸಮಾಜದಲ್ಲಿ ಸಿಲುಕಿ ಪೂರ್ಣ ಪ್ರಮಾಣದಲ್ಲಿ ಪ್ರಕಟವಾಗುತ್ತಿಲ್ಲ; ಆದ್ದರಿಂದ ಸಮಾಜದ ಅನಿಸಿಕೆಗಳಿಗೆ ಹೆದರದೆ ತಮ್ಮ ಒಳಗಿನ ತುಡಿತದಂತೆ ಕ್ರಿಯಾಶೀಲವಾಗುವ ಬದುಕಿನ ಹಾದಿಯನ್ನು ಆರಿಸಿಕೊಳ್ಳಬೇಕು ಎಂದು ತೇಜಸ್ವಿ ಭಾವಿಸಿದವರು. ಸಮಾಜವು ಅವರ ಕಥನದಲ್ಲಿ ಎದುರಾಳಿಯಾಗಿ ಬರುತ್ತದೆ; ತಲೆಗೆ ಏನಾದರೂ ಹುಚ್ಚು ಹತ್ತಿಸಿಕೊಂಡು ಮನೆಬಿಟ್ಟು 'ಪೋಲಿ' ತಿರುಗುವವರೆ ಅವರ ಕಥನದ ಹೀರೋಗಳು: 'ಕರ್ವಾಲೊ'ನ ಮಂದಣ್ಣ, ಪ್ರಭಾಕರ, ನಿರೂಪಕ, ಪ್ಯಾರಾನಂತವರು ಅರಿವನ್ನು ಮಾನವೇತರ ಶಕ್ತಿಗಳ ಪರಿಯು ತೇಜಸ್ವಿ ದರ್ಶನದ ವಿಶಿಷ್ಟತೆಯೊ ಅಸಹಾಯಕತೆಯೊ ಎಲ್ಲ ಬಗೆಯ ವ್ಯವಸ್ಥೆಯಿಂದ ಹೊರಗಿರಲು ಬಯಸುವ, ಬೇರೆಯವರು ಮಾಡಿದ ಚೌಕಟ್ಟುಗಳಲ್ಲಿ ಬದುಕಲು ನಿರಾಕರಿಸುವ, ಸ್ವತಂತ್ರ ಮನಸ್ಸಿನ ವ್ಯಕ್ತಿಗಳಲ್ಲಿ ತೇಜಸ್ವಿ ಕಥನವು ಜೀವಂತಿಕೆಯನ್ನು ಅರಸುತ್ತದೆ: 'ಕರ್ವಾಲೊ'ದ ಮಂದಣ್ಣ, ಪ್ರಭಾಕರ ಪ್ಯಾರ ಇವರು ಸಂಸಾರದ ಚೌಕಟ್ಟುಗಳಲ್ಲಿ ಸಿಲುಕದವರು. ಇವರನ್ನು ಕುವೆಂಪು ಪರಿಭಾಷೆಯಲ್ಲಿ ನಿರಂಕುಶಮತಿಗಳು ಎಂದು ಕರೆವುದಾದರೆ, ತೇಜಸ್ವಿ ಕಥನ ಇಂತಹವರನ್ನು ಶೋಧಿಸುತ್ತದೆ. ಇವರು ತಮ್ಮ ಪರಿಸರದ ಸಮಾಜವನ್ನು ಬದಲಾಯಿಸುವ ಸಮೂಹದ ನಾಯಕರಲ್ಲ; ಆದರೆ ಚಲನೆಕಳೆದುಕೊಂಡ ಸಮಾಜದಲ್ಲಿ ತಮ್ಮದೇ ಸೃಜನಶೀಲ ಹೊಸಹಾದಿಗಳನ್ನು ಹಠದಿಂದ ಹುಡುಕಿಕೊಳ್ಳುವವರು; ತೇಜಸ್ವಿ

ಸಾಹಿತ್ಯ ಸೃಜನಶೀಲ ಸಮಾಜವನ್ನು ಚಿತ್ರಿಸುವುದಿಲ್ಲ; ಜಡಸಮಾಜದಲ್ಲಿ ಸೃಜನಶೀಲ ವ್ಯಕ್ತಿಗಳನ್ನು ಶೋಧಿಸುತ್ತಾರೆ.

## ಪರಾಮರ್ಶನ ಗ್ರಂಥಗಳು:


1. ತೇಜಸ್ವಿ. (1992). ಕರ್ವಾಲೋ. ಪುಸ್ತಕ ಪ್ರಕಾಸನ. ಮೈಸೂರು.
2. ಶಾರದಾ ಬಿ. ಎನ್. (ಸಂ). (2004). ಸಮಾಜವಾದವೇ ಪರ್ಯಾಯ. ಸಂಬುದ್ಧ ಪ್ರಕಾಶನ. ಬೆಂಗಳೂರು.
3. ಪೂರ್ಣಚಂದ್ರ ತೇಜಸ್ವಿ. (1996). ಅಣ್ಣನ ನೆನಪು. ಪುಸ್ತಕ ಪ್ರಕಾಶನ. ಮೈಸೂರು.
4. ನಟರಾಜ್ ಹುಳಿಯಾರ್ (ಸಂ). (2019). ಸಮಕಾಲೀನ ಲೋಹಿಯಾ: ರಾಮಮನೋಹರ ಲೋಹಿಯಾ ವಾಚಿಕೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ. ಬೆಂಗಳೂರು.
5. ಲಕ್ಷ್ಮೀನಾರಾಯಣ ಅರೋರಾ. (2008). ಕಾದಂಬರಿಗಳ ವಿಮರ್ಶೆ. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.
6. ಕೇಶವ ಶರ್ಮ ಕೆ. (1990). ನವೋದಯ ವಿಮರ್ಶೆ ತಾತ್ವಿಕ ನಿಲುವುಗಳು. ಜನವಾದಿ ಪ್ರಕಾಶನ. ಬೆಂಗಳೂರು.
7. ನಾಯಕ ಜಿ. ಹೆಚ್. (1984). ನಿರಪೇಕ್ಷ (ಸಾಹಿತ್ಯ ವಿಮರ್ಶೆ). ಅಕ್ಷರ ಪ್ರಕಾಶನ. ಸಾಗರ.
8. ನಾಯಕ ಜಿ. ಹೆಚ್. (1980). ಅನಿವಾರ್ಯ. ಅಕ್ಷರ ಪ್ರಕಾಶನ. ಸಾಗರ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.